**ಸಾಕ್ಷಿಯನ್ನು ದಿಃ 11.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಎಂ.ಡಿ.ಸಿ. ವಕೀಲರಿಂದಃ**

ನಾನು 7 ನೇ ತರಗತಿ ವರೆಗೆ ಓದಿರುತ್ತೇನೆ. ನಾನು ಗೃಹಿಣಿಯಾಗಿದ್ದೇನೆ. ನಾನು ನನ್ನ ಕೆಲಸದ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನನ್ನ ಯಜಮಾನರು ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು. ಅವರು 10 ನೇ ತರಗತಿ ವರೆಗೆ ಓದಿರುತ್ತಾರೆ. ನಿಪಿ. 20 ರಂತೆ ನನ್ನ ಯಜಮಾನರು ಸರ್ವೀಸ್ ಇಂಜಿನಿಯರ್ ಎಂದು ದಾಖಲೆ ಹಾಜರು ಪಡಿಸಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕಲಿತು ಕೆಲಸಕ್ಕೆ ಸೇರಿರುವ ಕಾರಣ ಅವರ ಮಾಲೀಕರಿಂದ ಹಾಜರು ಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಯಜಮಾನರ ವಿದ್ಯಾಭ್ಯಾಸದ ದಾಖಲೆಗಳನ್ನು ಕೇಳದೆ ಇರುವ ಕಾರಣ ಹಾಜರು ಪಡಿಸಿಲ್ಲ. ನಿಪಿ. 20 ರ ಪ್ರಕಾರ ನಿಮ್ಮ ಯಜಮಾನರು 2022 ರಿಂದ 2024 ರವರೆಗೆ ಅದರಲ್ಲಿ ಕಾಣಿಸಿರುವ ವರೆಗೆ ಮಾತ್ರ ಸಂಬಳ ನೀಡಿರುವುದಾಗಿ ನಮೂದಿದೆ ಎಂದರೆ ಸಾಕ್ಷಿಯು ನಗದಾಗಿ ಸಹ ಹಣ ಕೊಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ದಿಃ 12.10.2022 ಕ್ಕೆ ಮುಂಚೆ ನಿಮ್ಮ ಯಜಮಾನರು ಏನು ಕೆಲಸ ಮಾಡುತ್ತಿದ್ದರು ಎಂದರೆ ಮತ್ತೊಂದು ಕಂಪ್ಯೂಟರ್ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದರು. ಆ ಬಗ್ಗೆ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತ ದಿಃ 26.01.2024 ರಂದು ಆಗಿದೆ ಎಂದರೆ ಸರಿ. ನಿಪಿ. 20 ಅನ್ನು ನಾನು ಸೃಷ್ಠಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಿಪಿ. 20 ರ ಮಾಲೀಕರು ಹಾಗೂ ನನ್ನ ಯಜಮಾನರು ಸ್ನೇಹಿತರು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಯಜಮಾನರ ಮೇಲೆ ಸಹ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳನ್ನು ನೋಡಿ ಹಾಜರು ಪಡಿಸಿರುತ್ತೇನೆ. ನಿಪಿ. 1 ನನ್ನ ಯಜಮಾನರಿಗೆ ಸಂಬಂಧಿಸಿದ್ದು. ನಿಪಿ. 2 ರಲ್ಲಿ ರವಿಕುಮಾರ್ ನನ್ನ ಯಜಮಾನರು. ಆ ದಿನ ನನ್ನ ಯಜಮಾನರು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಯಜಮಾನರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಎದುರುಗಡೆಯಿಂದ ಬಂದ ಸರಿಯಾದ ಪಥದಲ್ಲಿ ಬಂದಿದ್ದು

ನನ್ನ ಯಜಮಾನರು ತಪ್ಪು ಪಥದಲ್ಲಿ ಹೋಗಿ ಡಿಕ್ಕಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಅಪಘಾತಕ್ಕೆ ನನ್ನ ಯಜಮಾನರ ನಿರ್ಲಕ್ಷ್ಯವೇ ಕಾರಣ ಎಂದರೆ ಸರಿಯಲ್ಲ. ನಿಪಿ. 3 ಮಹಜರ್ ನಲ್ಲಿ ರಸ್ತೆ ರಿಪೇರಿ ನಡೆಯುತ್ತಿತ್ತು ಎಂಬ ಬಗ್ಗೆ ನಮೂದು ಇಲ್ಲ. ನನ್ನ ಗಂಡ ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ತರಕಾರಿ ವ್ಯಾಪಾರ ಮಾಡಿ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತರಕಾರಿ ವ್ಯಾಪಾರದ ಅಂಗಡಿ ನಡೆಸಲು ಪರವಾನಗಿ ಪಡೆದಿಲ್ಲ. ತರಕಾರಿ ಅಂಗಡಿ ನಡೆಸುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಗಂಡನ ತಪ್ಪು ಇರುವ ಕಾರಣ ಅವರ ಮೇಲೆ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.